# M.M. RUBBER COMPANY LIMITED

**REGD. OFFICE**

EMPIRE INFANTRY, III FLOOR, 29, INFANTRY ROAD, BANGALORE-560 001. INDIA
PH : 91-80-22866268, 22867065 FAX : 91-80-22861542 URL : www.mmfoam.in
CIN : L25190KA1964PLC052092 GST IN : 29AAACM2611E1ZX


August 09, 2021

Bombay Stock Exchange
Department of Corporate Affairs
Floor No.25, Phiroze Jeejeebhoy Towers,
Dalal Street, MUMBAI-400 001
Telephone: 22721234

Dear Sirs,

**Re: Newspaper Advertisement of the Un-Audited Financial Result for the quarter ended 30th June 2021**

Please find attached herewith the copy of the newspaper advertisement of company's un-audited financial results for the quarter ended 30th June 2021 in the Financial Express and in the Kannada Sanjevani dated 7th August 2021.

Kindly take same on your records and acknowledge the same.

Thanking you,

Yours faithfully,

For M.M. RUBBER COMPANY LIMITED

Sharvari Kulkarni
Company Secretary(A55902)

(ಮೂರನೇ ಪುಟದಿಂದ)

# ವಾರಾಂತ್ಯ ಕರ್ಫ್ಯೂ ಜನರ ನಿರ್ಲಕ್ಷ್ಯ

ಈ ನಿಟ್ಟಿನಲ್ಲಿ ಅತ್ತಿಬೆಲೆಯ ತಮಿಳುನಾಡು ಗಡಿಯಲ್ಲೂ ತೀವ್ರ ಕಟ್ಟೆಚ್ಚರ ವಹಿಸಲಾಗಿದೆ.

ರಾಜ್ಯದಲ್ಲಿ ನೈಟ್ ಕರ್ಫ್ಯೂ ಮತ್ತು ಗಡಿಭಾಗದ ಜಿಲ್ಲೆಗಳಲ್ಲಿ ವಾರಾಂತ್ಯ ಕರ್ಫ್ಯೂ ಘೋಷನೆ ಮಾಡಿದ್ದು, ಈಗಾಗಲೇ ಪ್ರಯಾಣಿಕರ ತಪಾಸಣೆಗೊಳಪಡಿಸಲಾಗಿದೆ. ಆರ್‌ಟಿಪಿಸಿಆರ್ ವರದಿ ಅಥವಾ ಕೋವಿಡ್ ಲಸಿಕೆ ಪಡೆದಿರುವ ದಾಖಲೆಯನ್ನು ಕಡ್ಡಾಯಗೊಳಿಸಲಾಗಿದೆ.

ಚೆಕ್‌ಪೋಸ್ಟ್‌ಗಳಲ್ಲಿ ಪೊಲೀಸರು ಪ್ರಯಾಣಿಕರನ್ನು ತೀವ್ರ ತಪಾಸಣೆಗೊಳಪಡಿಸಲಾಗಿದ್ದು, ಈ ವರದಿಗಳಿಲ್ಲದ ಪ್ರಯಾಣಿಕರನ್ನು ವಾಪಸ್ ಕಳುಹಿಸುತ್ತಿದ್ದಾರೆ. ಇನ್ನೂ ಕೆಲವು ಪ್ರಯಾಣಿಕರನ್ನು ಗಡಿಯಲ್ಲೇ ಕೋವಿಡ್ ತಪಾಸಣೆಗೆ ಒಳಪಡಿಸಲಾಗುತ್ತಿದೆ.

ಅಂತಾರಾಜ್ಯ ಚೆಕ್‌ಪೋಸ್ಟ್ ಬಳಿ 10ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದ್ದು, ತಮಿಳುನಾಡು, ಕೇರಳ ಮತ್ತು ಮಹಾರಾಷ್ಟ್ರ ರಾಜ್ಯಗಳಿಂದ ನೂರಾರು ವಾಹನಗಳು ಆಗಮಿಸುತ್ತಿದ್ದು, ಸಾವಿರಾರು ಪ್ರಯಾಣಿಕರನ್ನು ತಪಾಸಣೆಗೊಳಪಡಿಸುವುದು ಪೊಲೀಸರಿಗೆ ಸವಾಲಾಗಿ ಪರಿಣಮಿಸಿದೆ.

ಒಮ್ಮೆಲೆ ವಾಹನಗಳು ಆಗಮಿಸುತ್ತಿರುವುದರಿಂದ ಚೆಕ್‌ಪೋಸ್ಟ್‌ಗಳಲ್ಲಿ ತಪಾಸಣೆ ಮಾಡುವುದು ಪೊಲೀಸರಿಗೆ ತಲೆನೋವಾಗಿ ಪರಿಣಮಿಸಿದೆ.

# ರೌಡಿ ಮಜರ್‌ನ ಭೀಕರ ಕೊಲೆ

ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿದ್ದಾರೆ.

ಸ್ಥಳಕ್ಕೆ ಡಿಸಿಪಿ ಶರಣಪ್ಪ ಅವರು ಭೇಟಿ ನೀಡಿ ಕೃತ್ಯದ ಮಾಹಿತಿಯನ್ನು ಪಡೆದಿದ್ದು ಮಜರ್ ಕೊಲೆ ಮಾಡಿದ ನಾಲ್ವರನ್ನು ವಶಕ್ಕೆ ತೆಗೆದುಕೊಂಡು ಹೆಚ್ಚಿನ ತನಿಖೆಯನ್ನು ಕೈಗೊಳ್ಳಲಾಗಿದೆ ಎಂದು ಹೇಳಿದರು.

ರೌಡಿ ಮಜರ್ ಎರಡು ಕೊಲೆ, ಎರಡು ಕೊಲೆಯತ್ನ, ಬೆದರಿಕೆ, ಸುಲಿಗೆ, ಹಲ್ಲೆ ಸೇರಿ 8ಕ್ಕೂ ಗಂಭೀರವಾದ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದು ಜೈಲಿಗೆ ಹೋಗಿ ಜಾಮೀನಿನ ಮೇಲೆ ಬಿಡುಗಡೆಯಾಗಿ ಬಂದಿದ್ದ ಎಂದರು.

# ಖಾತೆ ಹಂಚಿಕೆ ನೂತನ ಸಚಿವರಿಗೆ ಬಂಪರ್

ಅಭಿವೃದ್ಧಿ, ಡಿಪಿಎಆರ್ ಮತ್ತು ಯಾವುದೇ ಸಚಿವರುಗಳಿಗೆ ಹಂಚಿಕೆಯಾಗದ ಖಾತೆಗಳು.

- ಗೋವಿಂದ ಎಂ. ಕಾರಜೋಳ– ಜಲಸಂಪನ್ಮೂಲ
- ಕೆ.ಎಸ್ ಈಶ್ವರಪ್ಪ– ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
- ಆರ್.ಅಶೋಕ್– ಕಂದಾಯ
- ಬಿ. ಶ್ರೀರಾಮುಲು–ಸಾರಿಗೆ ಮತ್ತು ಪರಿಶಿಷ್ಟ ಪಂಗಡ ಕಲ್ಯಾಣ ಇಲಾಖೆ.
- ಅರಗ ಜ್ಞಾನೇಂದ್ರ–ಗೃಹ ಇಲಾಖೆ
- ವಿ. ಸೋಮಣ್ಣ–ವಸತಿ,
- ಉಮೇಶ್‌ಕತ್ತಿ–ಆಹಾರ ಮತ್ತು ಅರಣ್ಯ ಇಲಾಖೆ.
- ವಿ. ಸುನಿಲ್ ಕುಮಾರ್– ಇಂಧನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ
- ಬಿ.ಸಿ ನಾಗೇಶ್– ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಮತ್ತು ಸಕಾಲ
- ಡಾ. ಸಿ.ಎನ್ ಅಶ್ವತ್ಥ ನಾರಾಯಣ–ಉನ್ನತ ಶಿಕ್ಷಣ, ಐಟಿ–ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ
- ಜೆ.ಸಿ ಮಾಧುಸ್ವಾಮಿ–ಸಣ್ಣ ನೀರಾವರಿ, ಸಂಸದೀಯ ವ್ಯವಹಾರ ಮತ್ತು ಕಾನೂನು, ಶಾಸನ ರಚನೆ
- ಸಿ.ಸಿ ಪಾಟೀಲ್– ಲೋಕೋಪಯೋಗಿ ಇಲಾಖೆ
- ಆನಂದ್‌ಸಿಂಗ್– ಜೀವಿಶಾಸ್ತ್ರ, ಪರಿಸರ ಮತ್ತು ಪ್ರವಾಸೋದ್ಯಮ
- ಕೋಟಾಶ್ರೀನಿವಾಸ ಪೂಜಾರಿ –ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಇಲಾಖೆ
- ಪ್ರಭುಚೌಹಾಣ್– ಪಶುಸಂಗೋಪನೆ
- ಮುರುಗೇಶ್ ನಿರಾಣಿ– ಬೃಹತ್ ಮತ್ತು ಮಧ್ಯಮ ಕೈಗಾರಿಕೆ
- ಎ. ಶಿವರಾಂ ಹೆಬ್ಬಾರ್– ಕಾರ್ಮಿಕ
- ಎಸ್.ಟಿ ಸೋಮಶೇಖರ್– ಸಹಕಾರ
- ಬಿ.ಸಿ ಪಾಟೀಲ್–ಕೃಷಿ
- ಭೈರತಿ ಬಸವರಾಜು– ನಗರಾಭಿವೃದ್ಧಿ ಇಲಾಖೆ
- ಡಾ. ಕೆ. ಸುಧಾಕರ್– ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ
- ಕೆ. ಗೋಪಾಲಯ್ಯ– ಅಬಕಾರಿ
- ಶಶಿಕಲಾ ಜೊಲ್ಲೆ– ಮುಜರಾಯಿ, ಹಜ್ ಮತ್ತು ವಕ್ಫ್
- ಎಂ.ಟಿ.ಬಿ ನಾಗರಾಜ್– ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ
- ಕೆ.ಸಿ ನಾರಾಯಣಗೌಡ– ರೇಷ್ಮೆ, ಕ್ರೀಡೆ ಮತ್ತು ಯುವ ಜನ ಸಬಲೀಕರಣ
- ಹಾಲಪ್ಪ ಆಚಾರ್–ಗಣಿ ಮತ್ತು ಭೂವಿಜ್ಞಾನ
- ಶಂಕರ್ ಪಾಟೀಲ್ ಮುನೇನಕೊಪ್ಪ–ಜವಳಿ ಮತ್ತು ಕೈಮಗ್ಗ, ಸಕ್ಕರೆ ಇಲಾಖೆ
- ಮುನಿರತ್ನ–ತೋಟಗಾರಿಕೆ ಯೋಜನೆ ಮತ್ತು ಸಾಂಖ್ಯಿಕ ಇಲಾಖೆ
- ಎಸ್. ಅಂಗಾರ– ಮೀನುಗಾರಿಕೆ, ಬಂದರು ಮತ್ತು ಒಳನಾಡು ಸಾರಿಗೆ

ಹೊಸಬದಲಾವಣೆತರುವದಿಸೆಯಲ್ಲಿ ಸಚಿವರುಗಳಿಗೆ ಖಾತೆ ಹಂಚಿಕೆ ಮಾಡಲಾಗಿದೆ. ಎಲ್ಲ ಸಚಿವರುಗಳು ತಮಗೆ ನೀಡಿರುವ ಖಾತೆಗಳಲ್ಲಿ ಕೆಲಸಮಾಡುತ್ತಾರೆ ಎಂಬ ವಿಶ್ವಾಸವಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಬೆಂಗಳೂರಿನಲ್ಲಿ ಬಿಜೆಪಿ ಆಯೋಜಿಸಿದ್ದ ಕಾರ್ಯಕ್ರಮದ ನಂತರ ಸುದ್ದಿಗಾರರೊಂದಿಗಾ ಮಾತನಾಡಿದ ಅವರು, ಬದಲಾವಣೆ ತರುವ ನಿಟ್ಟಿನಲ್ಲಿ ಹೊಸಬರಿಗ ಮಹತ್ವದ ಖಾತೆಗಳನ್ನು ನೀಡಲಾಗಿದೆ ಎಂದರು.

ಖಾತೆ ಹಂಚಿಕೆ ಬಗ್ಗೆ ಆನಂದ್ ಸಿಂಗ್ ಅಸಮಾಧಾನ ವ್ಯಕ್ತಪಡಿಸಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಆನಂದ್‌ಸಿಂಗ್ ನನ್ನ ಒಳ್ಳೆಯ ಸ್ನೇಹಿತರು ಅವರನ್ನು ಕರೆದು ಮಾತನಾಡುತ್ತೇನೆ ಎಂದರು.

# ನಗರಕ್ಕೆ ಡೆಲ್ಟಾ ಪ್ಲಸ್

ಆ ವ್ಯಕ್ತಿಗೆ ಡೆಲ್ಟಾ ಪ್ಲಸ್ ಸೋಂಕು ದೃಢಪಟ್ಟಿತ್ತು. ಮತ್ತಿಬ್ಬರು ಸೋಂಕಿತರು ನಂದಿನಿ ಲೇಔಟ್‌ನಲ್ಲಿದ್ದಾರೆ.

ಒಟ್ಟು ನಾಲ್ವರು ಹಾಗೂ ಇವರೊಂದಿಗೆ ಪ್ರಾಥಮಿಕ ಸಂಪರ್ಕ ಹೊಂದಿರುವ ಹತ್ತು ಮಂದಿ ಮೇಲೆ ಆರೋಗ್ಯಾಧಿಕಾರಿಗಳು ವಿಶೇಷ ನಿಗಾ ಇರಿಸಿದ್ದಾರೆ. ಮತ್ತೊಂದೆಡೆ, ಪೊಲೀಸರ ಸಹಾಯದಿಂದ ಪಾಲಿಕೆ ಅಧಿಕಾರಿಗಳು ನಾಪತ್ತೆಯಾಗಿರುವ ವ್ಯಕ್ತಿಯ ಹುಡುಕಾಟ ನಡೆಸುತ್ತಿದ್ದು, ಈತ ಮಾಗಡಿಯ ಸಂಬಂಧಿಕರ ಮನೆಯಲ್ಲಿರುವ ಮಾಹಿತಿ ಗೊತ್ತಾಗಿದೆ.

ಹಾಟ್ ಸ್ಪಾಟ್: ಬಿಬಿಎಂಪಿ ವ್ಯಾಪ್ತಿಯ ಹತ್ತು ವಾರ್ಡ್ ಗಳು ಕೋವಿಡ್ ಹಾಟ್ ಸ್ಪಾಪ್ ಗಳಾಗಿದ್ದು, ಕಳೆದ ಇಪ್ಪತ್ತು ದಿನಗಳಲ್ಲಿ ಅಧಿಕ ಪ್ರಕರಣು ದಾಖಲಾಗಿವೆ. ಇನ್ನು, ಹೊರಮಾವು, ಕಾಡುಗೋಡಿ, ಹಗದೂರು, ಬೆಳ್ಳಂದೂರು, ಸಿಂಗಸಂದ್ರ, ಬೇಗೂರು, ರಾಜರಾಜೇಶ್ವರಿ ನಗರ, ವರ್ತೂರು, ಬಸವಪುರ, ಕೆ.ಆರ್ ಪುರ ವಾರ್ಡ್ ಗಳಲ್ಲಿ ಪ್ರತಿ ದಿನ 5ರಿಂದ 10 ಪ್ರಕರಣಗಳು ಬೆಳಕಿಗೆ ಬರುತ್ತಿವೆ.

ಅದೇ ರೀತಿ, ಬಿಬಿಎಂಪಿ ವಲಯದಲ್ಲಿ ಮೈಕ್ರೋ ಕಂಟೈನ್ಮೆಂಟ್ ಝೋನ್ ಏರಿಕೆಯಾಗಿದ್ದು, ಸದ್ಯ 785 ಕಂಟೈನ್ಮೆಂಟ್ ಝೋನ್ ಗಳಿವೆ. ಅಲ್ಲದೆ, ಕಳೆದ ವಾರ ಎಂಟು ವಲಯದಲ್ಲಿ 100 ಕ್ಕೂ ಕಡಿಮೆ ಮೈಕ್ರೋ ಕಂಟೈನ್ಮೆಂಟ್ ಇತ್ತು.

ಒಟ್ಟಾರೆ, ನಗರದಲ್ಲಿ ಕೋವಿಡ್ ಸೋಂಕು ಹೆಚ್ಚಳವಾಗುವ ಮೂಲಕ ಮತ್ತೆ ಆತಂಕ ಮೂಡಿಸಿದೆ. ನೆರೆಯ ರಾಜ್ಯಗಳಲ್ಲಿ ಪ್ರಕರಣಗಳ ಹೆಚ್ಚಳವಾದ ಬೆನ್ನಲ್ಲೇ ಬೆಂಗಳೂರಿನಲ್ಲೂ ಕೂಡ ನಿಧಾನಗತಿಯಲ್ಲಿ ಏರಿಕೆಯಾಗುತ್ತಿವೆ ಎನ್ನುತ್ತಾರೆ ಆರೋಗ್ಯ ತಜ್ಞರು.

# ಕೆರೆಯಲ್ಲಿ ಅಪರಿಚಿತ ಮಹಿಳೆ ಶವ ಪತ್ತೆ

ಸಿರಾ, ಆ. 7– ತಾಲ್ಲೂಕಿನ ಕಳ್ಳಂಬೆಳ್ಳ ಕೆರೆಯಲ್ಲಿ ಅಪರಿಚಿತ ಮಹಿಳೆಯ ಶವ ಪತ್ತೆಯಾಗಿದೆ.

ಕಳ್ಳಂಬೆಳ್ಳೆ ಕೆರೆಯಲ್ಲಿ ಪತ್ತೆಯಾಗಿರುವ ಮೃತ ಅಪರಿಚಿತ ಮಹಿಳೆಗೆ ಸುಮಾರು 45 ರಿಂದ 50 ವರ್ಷ ವಯಸ್ಸಾಗಿರಬಹುದು ಎಂದು ಅಂದಾಜಿಸಲಾಗಿದೆ. ಇಂದು ಬೆಳಿಗ್ಗೆ 9 ಗಂಟೆಯ ಸಮಯದಲ್ಲಿ ಸ್ಥಳೀಯರು ಕೆರೆ ಬಳಿ ಬಂದು ನೋಡಿದಾಗ ಕೆರೆಯಲ್ಲಿ ಮಹಿಳೆಯ ಶವ ತೇಲುತ್ತಿರುವುದು ಕಂಡು ಬಂದಿದೆ. ತಕ್ಷಣ ಪೊಲೀಸರಿಗೆ ಸುದ್ದಿ ಮುಟ್ಟಿಸಿದ್ದು, ಸುದ್ದಿ ತಿಳಿದ ಕೂಡಲೇ ಕಳ್ಳಂಬೆಳ್ಳ ಪಿಎಸ್‌ಐ ಮೋಹನ್ ಮತ್ತು ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದರು.

ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಮುಂದಿನ ಕ್ರಮ ಜರುಗಿಸುತ್ತಿದ್ದಾರೆ.

# ಕೋವಿಡ್ ಬಿಕ್ಕಟ್ಟು ನಿರ್ವಹಣೆ, ಬಡವರಿಗೆ ಆದ್ಯತೆ:ಮೋದಿ

ನವದೆಹಲಿ , ಆ.7– ಕೋವಿಡ್ –19 ಬಿಕ್ಕಟ್ಟನ್ನು ಎದುರಿಸುವ ತನ್ನ ಕಾರ್ಯತಂತ್ರದಲ್ಲಿ ಬಡವರಿಗೆ ಮೊದಲ ಆದ್ಯತೆ ನೀಡಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಇಂದು ಹೇಳಿದ್ದಾರೆ.

ಮಧ್ಯಪ್ರದೇಶದ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆಯ ಫಲಾನುಭವಿಗಳೊಂದಿಗೆ ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಸಂವಾದ ನಡೆಸಿದ ವೇಳೆ ಈ ವಿಷಯ ತಿಳಿಸಿದರು.

ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಆನ್ನ ಯೋಜನೆ ಅಥವಾ ಪ್ರಧಾನ ಮಂತ್ರಿ ಗರಿಬ್ ಕಲ್ಯಾಣ್ ರೋಜಗಾರ್ ಯೋಜನೆ, ನಾವು ಆಹಾರ ಮತ್ತು ಉದ್ಯೋಗದ ಬಗ್ಗೆ ಯೋಚಿಸಿದ್ದೇವೆ ಎಂದು ಹೇಳಿದರು.

ದೇಶದಲ್ಲಿ ಕೋವಿಡ್ –19 ಆರಂಭವಾದ ನಂತರ 80 ಕೋಟಿಗೂ ಹೆಚ್ಚು ನಾಗರಿಕರಿಗೆ ಉಚಿತ ಪಡಿತರವನ್ನು ನೀಡಲಾಗಿದೆ. ಕೇವಲ ಗೋಧಿ, ಅಕ್ಕಿ ಅಥವಾ ದ್ವಿದಳ ಧಾನ್ಯಗಳು ಮಾತ್ರವಲ್ಲದೆ 8 ಕೋಟಿಗೂ ಹೆಚ್ಚು ಬಡ ಕುಟುಂಬಗಳಿಗೆ ಲಾಕ್‌ಡೌನ್ ಸಮಯದಲ್ಲಿ ಉಚಿತ ಗ್ಯಾಸ್ ಸಿಲಿಂಡರ್‌ಗಳನ್ನು ಸಹ ನೀಡಲಾಯಿತು ಎಂದರು.

20 ಕೋಟಿ ಮಹಿಳೆಯರು ತಮ್ಮ ಜನ್ ಧನ್ ಬ್ಯಾಂಕ್ ಖಾತೆಗಳಲ್ಲಿ ಸುಮಾರು 30,000 ಕೋಟಿ ರೂಪಾಯಿಗಳನ್ನು ನೇರವಾಗಿ ಪಡೆದರು" ಎಂದು ಪ್ರಧಾನಿ ಹೇಳಿದರು.

ಮಧ್ಯಪ್ರದೇಶದ ಹಲವು ಜಿಲ್ಲೆಗಳಲ್ಲಿ ಭಾರೀ ಮಳೆ ಮತ್ತು ಪ್ರವಾಹ ಉಂಟಾಗಿರುವುದು ದುರದೃಷ್ಟಕರ . ಇದರಿಂದಾಗಿ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ.

# ಜೆ&ಜೆ ಏಕ-ಡೋಸ್ ಲಸಿಕೆಗೆ ಕೇಂದ್ರ ಅನುಮೋದನೆ

ನವದೆಹಲಿ.ಆ7:ಜಾನ್ಸನ್ ಮತ್ತು ಜಾನ್ಸನ್ ಅವರ ಸಿಂಗಲ್ ಡೋಸ್ ಕರೋನ ಲಸಿಕೆಗೆ ಭಾರತದಲ್ಲಿ ತುರ್ತು ಬಳಕೆಗೆ ಅನುಮೋದನೆ ನೀಡಲಾಗಿದೆ. ಎಂದು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವಿಯಾ ಟ್ವೀಟ್ ಮಾಡಿದ್ದಾರೆ. ಜಾನ್ಸನ್ ಮತ್ತು ಜಾನ್ಸನ್ ಅವರ ಏಕ–ಡೋಸ್ ಕೋವಿಡ್–19 ಲಸಿಕೆಯನ್ನು ಭಾರತದಲ್ಲಿ ತುರ್ತು ಬಳಕೆಗೆ ಅನುಮೋದನೆ ನೀಡಲಾಗಿದೆ.

ಈಗ ಭಾರತದಲ್ಲಿ 5 ಲಸಿಕೆಗಳು ಇದೆ. ಇದು ಕೋವಿಡ್ ವಿರುದ್ಧದ ನಮ್ಮ ರಾಷ್ಟ್ರದ ಸಾಮೂಹಿಕ ಹೋರಾಟವನ್ನು ಮತ್ತಷ್ಟು ಹೆಚ್ಚಿಸುತ್ತದೆ ಅಂತ ಟ್ವಿಟ್ ಮಾಡಿದ್ದಾರೆ.



# ಲಾರಿಗಳ ಡಿಕ್ಕಿ: ಚಾಲಕನಿಗೆ ಗಾಯ

ಮಧುಗಿರಿ, ಆ. 7– ಪಟ್ಟಣದ ಹೊರವಲಯದಲ್ಲಿರುವ ಶ್ರೀರಾಘವೇಂದ್ರ ಇಂಟರ್ ನ್ಯಾಷನಲ್ ಸ್ಕೂಲ್ ಮುಂಭಾಗ ಹರಿಹರೇಶ್ವರ ದೇವಸ್ಥಾನ ತಿರುವಿನ ಬಳಿ ಸಿಮೆಂಟ್ ಮಿಕ್ಸರ್ ಲಾರಿ ಮತ್ತು ಮಿನಿ ಲಾರಿ ನಡುವೆ ಡಿಕ್ಕಿ ಸಂಭವಿಸಿ ಚಾಲಕ ತೀವ್ರವಾಗಿ ಗಾಯಗೊಂಡಿರುವ ಘಟನೆ ನಡೆದಿದೆ.

ಮಧುಗಿರಿಯಿಂದ ತುಮಕೂರು ಕಡೆ ಸಾಗುತ್ತಿದ್ದ ಸಿಮೆಂಟ್ ಮಿಕ್ಸರ್ ಲಾರಿ ಹಾಗೂ ತುಮಕೂರಿನಿಂದ ಮಧುಗಿರಿ ಕಡೆ ಬರುತ್ತಿದ್ದ ಕೂಲ್ ಡ್ರಿಂಕ್ಸ್ ತುಂಬಿದ ಲಾರಿ ಅತಿವೇಗ ಮತ್ತು ಅಜಾಗರೂಕತೆಯ ಪರಿಣಾಮ ಮುಖಾಮುಖಿ ಡಿಕ್ಕಿ ಸಂಭವಿಸಿದೆ. ಕೂಲ್ ಡ್ರಿಂಕ್ಸ್ ಗಾಡಿಯಲ್ಲಿರುವ ಚಾಲಕನಿಗೆ ತೀವ್ರಪೆಟ್ಟಾಗಿ ಮಧುಗಿರಿ ಸಾರ್ವಜನಿಕ ಆಸ್ಪತ್ರೆಗೆ ಸಾಗಿಸಲಾಯಿತು

ಈ ಅಪಘಾತದಿಂದ ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಈ ಭಾಗದಲ್ಲಿ ರಸ್ತೆಯಲ್ಲಿ ವಾಹನಗಳ ಸಂಚಾರ ಸ್ಥಗಿತಗೊಂಡಿತ್ತು.

ಸಿಮೆಂಟ್ ಮಿಕ್ಸರ್ ಲಾರಿ ರಸ್ತೆ ಬದಿಯಲ್ಲಿ ಉರುಳಿ ಬಿದ್ದಿತ್ತು. ಕೂಲ್ ಡ್ರಿಂಕ್ಸ್ ತುಂಬಿದ ಮಿನಿ ಲಾರಿ ಕೂಡ ರಸ್ತೆಯಲ್ಲಿ ಉರುಳಿ ಬಿದ್ದಿದ್ದನ್ನು ನೋಡಿದ ಸಾರ್ವಜನಿಕರು ಲಾರಿಯನ್ನು ಎತ್ತಿ ಹಿಡಿದು ಚಾಲಕನನ್ನು ಹೊರ ಎಳೆದು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ನಂತರ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಯಿತು.

ಘಟನಾ ಸ್ಥಳಕ್ಕೆ ಡಿವೈಎಸ್ಪಿ ಕೆ.ಜಿ. ರಾಮಕೃಷ್ಣ, ಸಿಪಿಐ ಎಂ.ಎಸ್. ಸರ್ದಾರ್, ಪಿಎಸ್‌ಐ ಮಂಗಳಗೌರಮ್ಮ ಹಾಗೂ ಪೊಲೀಸ್ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸಂಜೆವಾಣಿ ಶಾಪರ್ ಗೈಡ್
SANJEVANI SHOPPER GUIDE
For Details Contact
Mo: 9449871825
Ph: 22868882 22866213

ಸಂಗೀತ ತರಬೇತಿ
ಶ್ರೀ ಪಾತಾಳೇಶ್ವರ ಸಾಂಸ್ಕೃತಿಕ ಕಲಾ ಟ್ರಸ್ಟ್ (ರಿ) ವತಿಯಿಂದ ಉಚಿತವಾಗಿ ಸಂಗೀತ ಕೀ ಬೋರ್ಡ್ ನುಡಿಸುವುದನ್ನು ಹೇಳಿ ಕೊಡಲಾಗುವುದು. ಸಮಯ ಬೆಳಗ್ಗೆ 10.30 ರಿಂದ ಮಧ್ಯಾಹ್ನ 1 ಗಂಟೆವರೆಗೆ
ಸ್ಥಳ: ಕನಕ ದೇವಾಲಯದ ಹತ್ತಿರ, ನಂ. 5, 20 ನೇ ಅಡ್ಡರಸ್ತೆ, 3ನೇ ಮುಖ್ಯ ರಸ್ತೆ, ಕೆ.ಪಿ. ಅಗ್ರಹಾರ ಮಾಗಡಿ ರಸ್ತೆ, ಬೆಂಗಳೂರು–560023 ಸೂಚನೆ: ಕಡ್ಡಾಯವಾಗಿ ಕೀ ಬೋರ್ಡ್ ತರಲೇಬೇಕು.
ಮಾಸ್ಟರ್: ಬಸವರಾಜು. ಎಂ,
ಮೊ.ನಂ. 9611345629

FOR SALE
HONDA AMAZE CAR, Yellow Board, Diesel 2016 November Model, is For Sale. Well maintained. White Colour, Single Owner. Serious Buyers.
Please call: 98441 71083

**M M RUBBER COMPANY LIMITED**
Regd. Office: "Empire Infantry", 29, Infantry Road, Bangalore - 560 001
Ph: 2286 6268 | Fax: 2286 1542 | Website: www.mmfoam.in | E-mail: mmfoam27@gmail.com
CIN:L25190KA1964PLC052092

EXTRACT OF UNAUDITED STANDALONE FINANCIAL RESULTS FOR THE QUARTER ENDED JUNE 2021

| Particulars | Quater ended 30/06/2021 (Unaudited) | Quater ended 30/06/2020 (Unaudited) | Year ended 31/03/2021 (Audited) |
|---|---|---|---|
| 1. Total Income from operations (Net) | 565.87 | 294.24 | 2794.83 |
| 2. Net Profit/(Loss) form ordinary activities after tax | -30.60 | -103.36 | -374.88 |
| 3. Net Profit/(Loss) for the period after tax (after Extraordinary items) | -30.60 | -103.36 | -374.88 |
| 4. Total comprehensive income for the period (comprising profit/(loss) for the period (after tax) and other comprehensive income (after tax) | -30.60 | -103.36 | -374.88 |
| 5. Equity Share Capital | 124.62 | 124.62 | 124.62 |
| 6. Reserves (excluding Revaluation Reserve as shown in the Balance sheet of the previous year) | - | - | 516.80 |
| 7. Earnings per share (of Rs.2/- each) Basic : | -0.49 | -1.65 | -6.02 |
| Diluted: | -0.49 | -1.65 | -6.02 |

Note:
1. The above audited finanacial results were taken on record and approved by the Board of Directors at the meeting held on 06-08-2021
2. The above is an extract of the detailed format of Quarterly Financial Resluts filed with Stock Exchange under Regulation 33 of SEBI (Listing and other Disclosure Requirements) Regulations, 2015. The full froamt of the Quarterly Financial Resluts are available on the Websites of the Stock Exchnage (www.bseindia.com) and Company's website (www.mmfoam.in)

Place: Bangalore
Date: 06-08-2021

For MM RUBBER COMPANY LIMITED
sd/-
Roy Mammen
Managing Director



# ಪ್ರವಾಹ ಹಾನಿ ಸಮಗ್ರ ವರದಿ ನೀಡಲು ಸಚಿವರ ಸೂಚನೆ

ದಾವಣಗೆರೆ ಆ. 7; ಮಳೆಯಿಂದ ಉಂಟಾದ ಅತಿವೃಷ್ಟಿ ಹಾಗೂ ಪ್ರವಾಹದಿಂದಾಗಿ ಕೃಷಿ, ತೋಟಗಾರಿಕೆ ಬೆಳೆ ಹಾನಿ, ಜನ ಜಾನುವಾರುಗಳ ಪ್ರಾಣಹಾನಿ ಹಾಗೂ ರಸ್ತೆ, ಸೇತುವೆ, ಕಟ್ಟಡಗಳಿಗೆ ಉಂಟಾದ ಹಾನಿ ಕುರಿತ ಸಮಗ್ರ ವರದಿಯನ್ನು ತಾಲ್ಲೂಕುವಾರು ಸಿದ್ಧಪಡಿಸಿ ತ್ವರಿತವಾಗಿ ಸಲ್ಲಿಸುವಂತೆ ಉಸ್ತುವಾರಿ ಸಚಿವ ಬಿ.ಎ.ಬಸವರಾಜ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲೆಯ ಅತಿವೃಷ್ಟಿ, ಪ್ರವಾಹ ಮತ್ತು ಪರಿಹಾರ ಕಾರ್ಯಗಳ ಕುರಿತು ಹಾಗೂ ಕೊರೋನಾ 3ನೇ ಅಲೆ ತಡೆಗಟ್ಟಲು ತೆಗೆದುಕೊಳ್ಳುವ ಸಿದ್ಧತೆ ಕುರಿತಂತೆ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿನ ಮಳೆ, ಬೆಳೆ ಕುರಿತು ಮಾಹಿತಿ ನೀಡಿದ ಜಂಟಿಕೃಷಿ ನಿರ್ದೇಶಕರು, ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ವಾಡಿಕೆಗಿಂತಲೂ ಶೇ. 52 ರಷ್ಟು ಹೆಚ್ಚು ಮಳೆಯಾಗಿದೆ. ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲಿ ವಾಡಿಕೆಗಿಂತಲೂ ಹೆಚ್ಚು ಮಳೆಯಾಗಿದ್ದು, ಜುಲೈ ತಿಂಗಳೊಂದರಲ್ಲೇ ಶೇ. 97 ರಷ್ಟು ವಾಡಿಕೆಗಿಂತಲೂ ಹೆಚ್ಚು ಮಳೆಯಾಗಿದೆ. 2.45 ಲಕ್ಷ ಹೆ. ಬಿತ್ತನೆ ಗುರಿ ಎದುರಿಗೆ ಈಗಾಗಲೆ 1.48 ಲಕ್ಷ ಹೆ. ಬಿತ್ತನೆಯಾಗಿದ್ದು, ಭತ್ತದ ನಾಟಿ ಕಾರ್ಯ ಈಗಷ್ಟೇ ಪ್ರಾರಂಭವಾಗಿದೆ. ಜಿಲ್ಲೆಯಲ್ಲಿ ಸದ್ಯ ಯಾವುದೇ ಗೊಬ್ಬರ, ಬಿತ್ತನೆ ಬೀಜದ ಕೊರತೆ ಉಂಟಾಗಿಲ್ಲ ಎಂದರು.

ಕಳಪೆ ಗೊಬ್ಬರ, ಬೀಜ ಪೂರೈಕೆ, ಗೊಬ್ಬರವನ್ನು ಕಾಳಸಂತೆಯಲ್ಲಿ ಅಥವಾ ನಿಗದಿತ ದರಕ್ಕಿಂತ ಹೆಚ್ಚಿನ ದರದಲ್ಲಿ ಮಾರಾಟ ಮಾಡುವುದು ಕಂಡುಬಂದಲ್ಲಿ, ಅಂತಹ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ ಕಾನೂನು ರೀತ್ಯ ಕ್ರಮ ಜರುಗಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮಾತನಾಡಿ, ಹೆಚ್ಚಿನ ಮಳೆಯಿಂದಾಗಿ ಜಿಲ್ಲೆಯಲ್ಲಿ 972 ಹೆ. ಕೃಷಿ ಹಾಗೂ 975 ಹೆ. ತೋಟಗಾರಿಕೆ ಬೆಳೆ ಹಾನಿಯಾಗಿದ್ದು, ಜಂಟಿ ಸಮೀಕ್ಷೆ ನಡೆಸಿ ವರದಿ ಸಲ್ಲಿಸಲಾಗಿದೆ. ಅಲ್ಲದೆ ಪರಿಹಾರ ತಂತ್ರಾಂಶದಲ್ಲಿಯೂ ರೈತರು ಹಾಗೂ ಸರ್ವೆ ನಂ. ವಾರು ಮಾಹಿತಿಯನ್ನು ಅಳವಡಿಸಲಾಗಿದೆ. ವ್ಯಾಪಕ ಮಳೆ ಹಾಗೂ ಪ್ರವಾಹದಿಂದಾಗಿ ಜಿಲ್ಲೆಯಲ್ಲಿ ವಿವಿಧ ರಸ್ತೆಗಳು, ಸೇತುವೆ, ಶಾಲೆ ಮತ್ತಿತರ ಸರ್ಕಾರಿ ಕಟ್ಟಡಗಳು ಹಾನಿಗೊಳಗಾಗಿದ್ದು, 38.23 ಕೋಟಿ ರೂ. ಗಳ ನಷ್ಟದ ಅಂದಾಜು ಮಾಡಲಾಗಿದೆ. ಭದ್ರಾ ಜಲಾಶಯ ಈಗಾಗಲೆ ಗರಿಷ್ಟ 186 ಮೀ. ಬದಲಿಗೆ 185 ಮೀ. ನಷ್ಟು ತುಂಬಿದ್ದು, ಕ್ರಸ್ಟ್ ಗೇಟ್‌ನಿಂದ ನೀರು ಬಿಡಲಾಗಿದೆ. ನದಿ ಪಾತ್ರದ ಜನರಿಗೆ ಈಗಾಗಲೆ ಎಚ್ಚರಿಕೆ ನೀಡಲಾಗಿದ್ದು, ತೊಂದರೆ ಎದುರಿಸುವ ಕುಟುಂಬಗಳನ್ನು ಗುರುತಿಸಿ ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ವಿವರಿಸಿದರು

ಜನ, ಜಾನುವಾರುಗಳ ಜೀವ ಹಾನಿ ಹಾಗೂ ಬೆಳೆ ಹಾನಿಗೆ ಸಂಬಂಧಿಸಿದಂತೆ ಯಾವುದೇ ಸಂತ್ರಸ್ತರು ಪರಿಹಾರದಿಂದ ವಂಚಿತರಾಗಬಾರದು. ಅತಿವೃಷ್ಟಿ ಹಾಗೂ ಪ್ರವಾಹದಿಂದ ಉಂಟಾದ ಹಾನಿಗೆ ಸಂಬಂಧಿಸಿದಂತೆ ಇಲಾಖಾವಾರು ನಷ್ಟದ ವರದಿಯನ್ನು ಸಿದ್ಧಪಡಿಸಿ ತ್ವರಿತವಾಗಿ ಸರ್ಕಾರಕ್ಕೆ ಸಲ್ಲಿಸಬೇಕು ಎಂದು ಸಚಿವರು ನಿರ್ದೇಶನ ನೀಡಿದರು.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ-ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
ಜಾಹೀರಾತು ವ್ಯವಸ್ಥಾಪಕರು

# ಹಾಕಿ ಆಟಗಾರ್ತಿ ವಂದನಾಗೆ 25 ಲಕ್ಷ ರೂ ಬಹುಮಾನ

ಡೆಹ್ರಾಡೂನ್, ಅ.7–ಟೋಕಿಯೊ ಒಲಿಂಪಿಕ್ಸ್ ನ ಹಾಕಿ ವಿಭಾಗದಲ್ಲಿ ಉತ್ತಮ ಪ್ರದರ್ಶನ ನೀಡಿದ ವಂದನಾ ಕಟಾರಿಯಾ ಅವರಿಗೆ ಮುಖ್ಯಮಂತ್ರಿ ಪುಷ್ಕರ್ ಧಾಮಿ 25 ಲಕ್ಷ ರೂ ಬಹುಮಾನ ಪ್ರಕಟಿಸಿದ್ದಾರೆ.

ಒಲಿಂಪಿಕ್ಸ್ ನಲ್ಲಿ ಭಾರತದ ಮಹಿಳಾ ಹಾಕಿ ತಂಡ ಅದ್ವಿತೀಯ ಪ್ರದರ್ಶನ ನೀಡಿದೆ. ವಂದನಾ ಕಟಾರಿ ರಾಜ್ಯದ ಹೆಮ್ಮೆಯ ಪುತ್ರಿ. ಹಾಕಿಯಲ್ಲಿ ನೀಡಿದ ಪ್ರದರ್ಶನಕ್ಕಾಗಿ ಈ ಬಹುಮಾನ ಪ್ರಕಟಿಸಲಾಗಿದೆ ಎಂದು ಮುಖ್ಯಮಂತ್ರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಶೀಘ್ರದಲ್ಲೇ ರಾಜ್ಯದಲ್ಲಿ ಹೊಸ ಮತ್ತು ಆಕರ್ಷಕ ಕ್ರೀಡಾ ನೀತಿಯನ್ನು ಪ್ರಕಟಿಸಲಾಗುತ್ತದೆ. ಪ್ರಮುಖವಾಗಿ ಹಣಕಾಸು ನರವು ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಯುವಕರಿಗೆ ಅನುಕೂಲ ಕಲ್ಪಿಸುವ ರೀತಿಯಲ್ಲಿ ರೂಪಿಸಲಾಗುವುದು ಎಂದು ತಿಳಿಸಿದೆ.

**ಗ್ಲಿಟೆಕ್ ಗ್ರಾನೈಟ್ಸ್ ಲಿಮಿಟೆಡ್**
GLITTEK
ಸಿಐಎನ್ ನಂ.: ಎಲ್14102ಕೆಎ1990ಪಿಎಲ್‌ಸಿ023497
ರಿಜಿಸ್ಟರ್ಡ್ ಕಚೇರಿ: 42, ಕೆಐಎಡಿಬಿ ಕೈಗಾರಿಕಾ ಪ್ರದೇಶ, ಹೊಸಕೋಟೆ–562114

31ನೇ ಮಾರ್ಚ್, 2021ಕ್ಕೆ ಅಂತ್ಯಗೊಂಡ ವರ್ಷದ ಲೆಕ್ಕಶೋಧನೆಗೊಂಡ ಹಣಕಾಸು ಫಲಿತಾಂಶಗಳ ಎಕ್ಸ್‌ಟ್ರ್ಯಾಕ್ಟ್
(ಲಕ್ಷ ರೂ.ಗಳಲ್ಲಿ)

| ಕ್ರ ಸಂ. | ವಿವರಗಳು | ಅಂತ್ಯಗೊಂಡ ತ್ರೈಮಾಸಿಕ 31-03-2021 (ಲೆಕ್ಕಶೋಧನ) | ಅಂತ್ಯಗೊಂಡ ತ್ರೈಮಾಸಿಕ 31-03-2020 (ಲೆಕ್ಕಶೋಧನ) | ಅಂತ್ಯಗೊಂಡ ವರ್ಷ 31-03-2021 (ಲೆಕ್ಕಶೋಧನ) | ಅಂತ್ಯಗೊಂಡ ವರ್ಷ 31-03-2020 (ಲೆಕ್ಕಶೋಧನ) |
|---|---|---|---|---|---|
| 1. | ಹೂಡಿಕೆಯಿಂದ ಬಂದ ಒಟ್ಟು ಆದಾಯ (ನಿವ್ವಳ) | 300.61 | 373.57 | 1458.71 | 1825.61 |
| 2. | ನಿವ್ವಳ ಲಾಭ/ನಷ್ಟ ಈ ಅವಧಿಯ (ತೆರಿಗೆ ಮುಂಚಿನ, ಅಸಾಧಾರಣ ಮತ್ತು/ಅಥವಾ ಅಸಾಧಾರಣ ಐಟಂಗಳು) | -134.84 | -140.16 | -309.63 | -137.65 |
| 3. | ನಿವ್ವಳ ಲಾಭ/ನಷ್ಟ ಈ ಅವಧಿಯ (ತೆರಿಗೆ ಮುಂಚಿನ, ಅಸಾಧಾರಣ ಐಟಂಗಳ ನಂತರ ಮತ್ತು/ಅಥವಾ ಅಸಾಧಾರಣ ಐಟಂಗಳು) | -134.84 | -140.16 | -309.63 | -137.65 |
| 4. | ಈಕ್ವಿಟಿ ಷೇರು ಬಂಡವಾಳ | 1329.08 | 1329.08 | 1329.08 | 1329.08 |
| 5. | ಮೀಸಲುಗಳು (ಪುನರ್ ಮೌಲ್ವೀಕರಣಗೊಂಡ ಮೀಸಲುಗಳನ್ನು ಬಿಟ್ಟು ಹಿಂದಿನ ವರ್ಷದ ಬ್ಯಾಲೆನ್ಸ್ ಷೀಟ್ ಪ್ರಕಾರ) | 0.00 | 0.00 | 0.00 | 0.00 |
| 6. | ಒಂದು ಷೇರಿನ ಅರ್ನಿಂಗ್ (ಅಸಾಧಾರಣ ಐಟಂಗಳ ಮುಂಚಿನ) (ಮುಖಬೆಲೆ ರೂ. 5/– ಪ್ರತಿ) | | | | |
| | ಬೇಸಿಕ್: | -0.52 | -0.54 | -1.19 | -0.53 |
| | ಡಿಲ್ಯೂಟೆಡ್: | -0.52 | -0.54 | -1.19 | -0.53 |
| 7. | ಒಂದು ಷೇರಿನ ಅರ್ನಿಂಗ್ (ಅಸಾಧಾರಣ ಐಟಂಗಳ ನಂತರದ) (ಮುಖಬೆಲೆ ರೂ. 5/– ಪ್ರತಿ) | | | | |
| | ಬೇಸಿಕ್: | -0.52 | -0.54 | -1.19 | -0.53 |
| | ಡಿಲ್ಯೂಟೆಡ್: | -0.52 | -0.54 | -1.19 | -0.53 |

ಸೂಚನೆ: ಮೇಲ್ಕಂಡ ವಿವರಗಳು ಸೆಬಿ (ಲಿಸ್ಟಿಂಗ್ ಮತ್ತು ಇತರ ಡಿಸ್ಕ್ಲೋಸರ್ ರಿಕ್ವೈರ್‌ಮೆಂಟ್) ರೆಗ್ಯುಲೇಷನ್, 2015ರ ರೆಗ್ಯುಲೇಷನ್ 33ರ ಸ್ಟಾಕ್ ಎಕ್ಸ್‌ಚೇಂಜ್ ಅಡಿಯಲ್ಲಿ ಷೇರು ವಿನಿಮಯಗಳಲ್ಲಿ ತ್ರೈಮಾಸಿಕ ಮತ್ತು ವಾರ್ಷಿಕ ಹಣಕಾಸು ಫಲಿತಾಂಶಗಳನ್ನು ಫೈಲ್ ಮಾಡಲಾಗಿದೆ. ತ್ರೈಮಾಸಿಕ/ ವಾರ್ಷಿಕ ಹಣಕಾಸು ಫಲಿತಾಂಶಗಳು ಸ್ಟಾಕ್ ಎಕ್ಸ್‌ಚೇಂಜ್‌ನ ವೆಬ್‌ಸೈಟ್ www.bseindia.com ಮತ್ತು ಕಂಪನಿಯ ವೆಬ್‌ಸೈಟ್ www.glittek.com ನಲ್ಲಿ ಲಭ್ಯವಿದೆ.

ಮಂಡಳಿಯ ಆದೇಶದ ಮೇರೆಗೆ
ಗ್ಲಿಟೆಕ್ ಗ್ರಾನೈಟ್ಸ್ ಲಿಮಿಟೆಡ್ ಪರವಾಗಿ
ಕಮಲ್‌ಕುಮಾರ್ ಅಗರವಾಲ್
ವ್ಯವಸ್ಥಾಪಕ ನಿರ್ದೇಶಕ

ಸ್ಥಳ: ಹೊಸಕೋಟೆ
ದಿನಾಂಕ: 6ನೇ ಆಗಸ್ಟ್, 2021.

**ಗಿಲಾಡ ಫೈನಾನ್ಸ್ ಅಂಡ್ ಇನ್‌ವೆಸ್ಟ್‌ಮೆಂಟ್ಸ್ ಲಿಮಿಟೆಡ್**
GILADA GROUP Reliable Renewable Responsible
CIN: L65910KA1994PLC015981
ನೋಂದಣಿ ಕಛೇರಿ: #105 ಆರ್.ಆರ್ ತಕ್ತ್, 37, ಭೂಪಸಂದ್ರ ಮುಖ್ಯ ರಸ್ತೆ, ಬೆಂಗಳೂರು–560094, ಕರ್ನಾಟಕ. ದೂರವಾಣಿ : 080–40620000 (30 ಲೈನುಗಳು) ಫ್ಯಾಕ್ಸ್: 080–40620009;
ಇ–ಮೇಲ್: md@giladagroup.com, Website: www.giladafinance.com

(ಜೂನ್ 30, 2021ಕ್ಕೆ ಕೊನೆಗೊಂಡ ತ್ರೈಮಾಸಿಕ ಅವಧಿಯ ಪುನರಾವಲೋಕಿತ ಪ್ರತ್ಯೇಕವಾದ ವಿತ್ತೀಯ ಫಲಿತಾಂಶಗಳು)
[ಸೆಬಿ (ಎಲ್‌ಓಡಿಆರ್) ನಿಬಂಧನೆ, 2015 ರ ನಿಬಂಧನೆ 47(1) (ಬಿ)]
(ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ವಿವರಗಳು | | ತ್ರೈಮಾಸಿಕ್ಕೆ ಕೊನೆಗೊಂಡಂತೆ | | ವಾರ್ಷಿಕ ಅವಧಿಗೆ ಕೊನೆಗೊಂಡಂತೆ |
|---|---|---|---|---|---|
| | | 30ನೇ ಜೂನ್ 2021ರಂತೆ (ಪರಿಶೋಧಿಸದ) | 31ನೇ ಮಾರ್ಚ್ 2021ರಂತೆ (ಪರಿಶೋಧಿತ) | 30ನೇ ಜೂನ್ 2020ರಂತೆ (ಪರಿಶೋಧಿಸದ) | 31ನೇ ಮಾರ್ಚ್ 2021ರಂತೆ (ಪರಿಶೋಧಿತ) |
| 1. | ಕಾರ್ಯಾಚರಣೆಯಿಂದ ಒಟ್ಟು ಆದಾಯ | 75.76 | 83.20 | 73.74 | 337.37 |
| 2 | ಒಟ್ಟು ವೆಚ್ಚ | 32.48 | 47.81 | 26.12 | 141.81 |
| 3. | ನಿವ್ವಳ ಲಾಭ/(ನಷ್ಟ) ಈ ಅವಧಿಗೆ (ತೆರಿಗೆ, ಅಸಾಮಾನ್ಯವಾದ ಮತ್ತು/ಅಥವಾ ಅಸಾಧಾರಣ ಬಾಬ್ತುಗಳ ಮುನ್ನ) | 43.28 | 35.39 | 47.62 | 195.56 |
| 4. | ನಿವ್ವಳ ಲಾಭ/(ನಷ್ಟ) ಈ ಅವಧಿಯ ತೆರಿಗೆ ಮುನ್ನ (ಅಸಾಮಾನ್ಯವಾದ ಮತ್ತು/ಅಥವಾ ಅಸಾಧಾರಣ ಬಾಬ್ತುಗಳ ನಂತರ) | 30.35 | 7.25 | 19.06 | 141.78 |
| 5. | ನಿವ್ವಳ ಲಾಭ/(ನಷ್ಟ) ಈ ಅವಧಿಯ ತೆರಿಗೆ ನಂತರ (ಅಸಾಮಾನ್ಯವಾದ ಮತ್ತು/ಅಥವಾ ಅಸಾಧಾರಣ ಬಾಬ್ತುಗಳ ನಂತರ) | 22.75 | (2.45) | 14.10 | 98.22 |
| 6. | ಈ ಅವಧಿಯ ಸಮಸ್ತ ಆದಾಯ (ಈ ಅವಧಿಗೆ (ತೆರಿಗೆ ನಂತರ) ಲಾಭ / (ನಷ್ಟ) ಒಳಗೊಂಡಂತೆ) ಮತ್ತು ಬೇರೆ ಸಮಸ್ತ ಆದಾಯ (ತೆರಿಗೆ ನಂತರ) | 22.75 | (2.45) | 14.10 | 98.22 |
| 7. | ಈಕ್ವಿಟಿ ಷೇರು ಬಂಡವಾಳ | 351.23 | 351.23 | 351.23 | 351.23 |
| 8. | ಕಾಯ್ದಿರಿಸಿದ (ಪುನ: ವಿಮರ್ಶಿಸಿಲಾದ ಕಾಯ್ದಿರಿಸಿದನ್ನು ಹೊರತು ಪಡಿಸಿ) ಕಳೆದ ವರ್ಷದ ಅವಲೋಕಿತ ಬ್ಯಾಲೆನ್ಸ್ ಶೀಟ್‌ನಲ್ಲಿ ಪ್ರಕಟಿಸಿದಂತೆ | – | – | – | 1159.94 |
| 9. | ಪ್ರತಿ ಷೇರಿನ ಗಳಿಕೆಗಳು: | | | | |
| | 1. ಮೂಲತವಾದ | 0.65 | (0.07) | 0.40 | 2.80 |
| | 2. ದುರ್ಬಲವಾದ | 0.65 | (0.07) | 0.40 | 2.80 |

ಸೂಚನೆಗಳು :
ಅ) ಮೇಲೆ ತಿಳಿಸಿರುವ ಫಲಿತಾಂಶವು ಸೆಬಿ (ಎಲ್‌ಓಡಿಆರ್) ನಿಬಂಧನೆ 33 (ಲಿಸ್ಟಿಂಗ್ ಅನಿವಾರ್ಯತೆ ಹಾಗೂ ತೆರೆದ ದಾಖಲಾತಿ ಅವಶ್ಯಕತೆಗಳು) ರ ಅನ್ವಯ ನಿಬಂಧನೆ 2015ರ ಆದೇಶದ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲಿಸಿದ ತ್ರೈಮಾಸಿಕ ಅವಧಿಯ ವಿತ್ತೀಯ ಫಲಿತಾಂಶದ ಪೂರ್ಣ ನಮೂನೆಯ ಪ್ರತ್ಯೇಕವಾದ ಸಾರಾಂಶವಾಗಿದೆ. ವಿತ್ತೀಯ ಫಲಿತಾಂಶದ ಪೂರ್ಣ ನಮೂನೆಯು ಕಂಪನಿಯ ವೆಬ್‌ಸೈಟ್ www.giladafinance.com ಹಾಗೂ ಸ್ಟಾಕ್‌ಎಕ್ಸ್‌ಚೇಂಜ್ ವೆಬ್‌ಸೈಟ್ www.bseindia.com ಗಳಲ್ಲಿ ಲಭ್ಯವಿದೆ.
ಆ) ಮೇಲಿನ ಫಲಿತಾಂಶಗಳನ್ನು ಲೆಕ್ಕಪರಿಶೋಧನಾ ಸಮಿತಿಯು ಪುನರಾವಲೋಕಿಸಿದೆ ಹಾಗೂ ಇದನ್ನು ನಿರ್ದೇಶಕರ ಮಂಡಳಿಯು ದಿನಾಂಕ – 06.08.2021ರಂದು ನಡೆದ ತನ್ನ ಸಭೆಯಲ್ಲಿ ಪರಿಗಣಿಸಿ ಅಂಗೀಕರಿಸಿದೆ.

ಗಿಲಾಡ ಫೈನಾನ್ಸ್ ಅಂಡ್ ಇನ್‌ವೆಸ್ಟ್‌ಮೆಂಟ್ಸ್ ಲಿಮಿಟೆಡ್ ಪರವಾಗಿ
ಸಹಿ/– (ರಾಜ್‌ಗೋಪಾಲ್ ಗಿಲಾಡ)
ವ್ಯವಸ್ಥಾಪಕ ನಿರ್ದೇಶಕರು, (DIN: 00307829)

ಸ್ಥಳ: ಬೆಂಗಳೂರು
ದಿನಾಂಕ : 06.08.2021

Edited. Printed and Published by B.T.Amuthan. 11/2, Queen's Road, Bangalore - 560052. For M/s KARNATAKA PUBLICATIONS (P) Ltd, 11/2, Queen's Road, Bangalore -560052. Printed at Dinasudar Printing Division, 11/2, Queen's Road, Bangalore - 560052. RNI No.36667/82